## ನಗರ ಡಿವೀಜ್ಞ.

### ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 31.

ಮೃತಪಟ್ಟ ಕೋಯಮುತ್ತೂರು ರಂಗಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಶ್ರೀನಿವಾಸ ಮೈನರ್ ಗಾರ್ಡಿಯ್ಯ ತಾಯಿ ರಂಗಮ್ಮ, ಮೃತಪಟ್ಟ ಸದರೀ ರಂಗಂಣನಿಗೆ ಸದರೀ ಶ್ರೀನಿವಾಸನು ಮಗನೆ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಮೈನರ್ ಶ್ರೀನಿವಾಸನ ತಾಯಿ ಮತ್ತು ಗಾರ್ಡಿಯ್ಯ ನಂಜನಗೂಡಿನಲ್ಲಿರುವ ಸದರೀ ರಂಗಂಣನ ಹೆಂಡತಿ ರಂಗಮ್ಮನು ಕಡೂರು ಡಿಸ್ಟ್ರಿಕ್ಟ್ ಹರಿಹರಪುರದ ವಾಸಸ್ಥನಾಗಿ ಮೃತಪಟ್ಟ ರಂಗಂಣನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂ ಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿಯಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮೈನರ್ ಶ್ರೀನಿವಾಸನ ತಾಯಿ ಮತ್ತು ಗಾರ್ಡಿಯ್ಯ ರಂಗಮ್ಮನ ಅರ್ಜೀಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 25ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಂಣನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಮಿಸ್ ಅರ್ಜೀ ನಂಬರ್ 32.

ಮೃತಪಟ್ಟ ಪ್ಲೀಡರ್ ನಾರಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ನಂಜಪ್ಪ ಮೃತಪಟ್ಟ ಸದರೀ ಪ್ಲೀಡರ್ ನಾರಣಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ತಾಲ್ಲೂಕು ಬ್ರಹ್ಮಸಮುದ್ರದಲ್ಲಿರುವ ನಂಜಪ್ಪನು ಸದರೀ ಬ್ರಹ್ಮಸಮುದ್ರದ ವಾಸಸ್ಥನಾಗಿ ಮೃತಪಟ್ಟ ಪ್ಲೀಡರ್ ನಾರಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜಪ್ಪನ ಅರ್ಜಿಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 25ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪ್ಲೀಡರ್ ನಾರಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ.

## ಹಾಸನ ಡಿಸ್ಟ್ರಿಕ್ಟ್.

### ಹೊಳೇನರಸೀಪುರದ ಸಬ್ ಡಿವಿಜ್ಞ ಮುನಸಿಫ್ ಕೋರ್ಟಿನಲ್ಲಿ.

ಸ್ಯ 1886ನೇ ಇಸವಿ ಸಿವಿಲ್ ನಂಬರ್ 732.

ವಾದಿ.

ಹೊಳೇನರಸೀಪುರದ ಕಸಬಾ ಹೋಬಳಿ ನಾಗಲಪುರದಲ್ಲಿ ಇರುವ ಈರೇಗವ್ವಡನ ಮಗ ಬಸವೇಗವ್ವಡ.

ಪ್ರತಿವಾದೀರು.

1ನೇ ಬಳ್ಳಾರಿ ಜಿಲ್ಲೆ ನಾರಾಯಣದೇವರ ಕೆರೆಯಲ್ಲಿರುವ ಮುಕುಂದಭಾರತೀರಮಣಾಚಾರ್ಯ ಪೌತ್ರ ಮತ್ತು ಮೃತಪಟ್ಟ ಹೊಳೇನರಸೀಪುರದ ಕುರಡಿ ರಾಮಾಚಾರ್ಯ ಪೌತ್ರ ಹನುಮಂತಾಚಾರ್ಯ ಪುರಘ ಕಮಲಾಬಾಯಿ

2ನೇ ಹೊಳೇನರಸೀಪುರದಲ್ಲಿರುವ ಸಾವಿತ್ರಮ್ಮ.

ಮೇಲೆ ಹೇಳಿರುವ 1ನೇ ಪ್ರತಿವಾದೀಗೆ— ಮೇಲ್ಕಂಡ ವಾದಿ ಬಸವೇಗವ್ವಡನು, ಮೃತಪಟ್ಟ ನಿಮ್ಮ ಗಂಡ ಬರದುಕೊಟ್ಟು ಇರುವ ಖಾಫಾ ತಮಸೂಕು ಬಾಬತು 118—12—3 ಪೈಗಳನ್ನ ಬರಮಾಡಿಸಿಕೊಡಬೇಕೆಂದು ನಿಮ್ಮ ಮೇಲೆ ವ್ಯಾಜ್ಯ ತಂದಿರುತ್ತಾರಾಗಿ ಈ ಕೋರ್ಟಿನಲ್ಲಿ ನೀವಾಗಲಿ, ಈ ವ್ಯಾಜ್ಯಕ್ಕೆ ಸಂಬಂಧಿಸಿದ ಮುಖ್ಯಗಳಾವ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಕ್ರಮಪ್ರಕಾರ ತಿಳಿಸಲ್ಪಟ್ಟ ಮತ್ತು ಸಮರ್ಥರಾದ ಅಥವಾ ಅಂಥಾ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಸಮರ್ಥನಾದ ಯಾವನಾದರೂ

ಒಬ್ಬ ಇತರ ಮನುಷ್ಯನ ಸಂಗಡ ಬರುವ ಒಬ್ಬ ವಕೀಲನ ಮೂಲಕವಾಗಲಿ, ಸದರೀ ವಾದೀಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ಯ 1887ನೇ ಇಸವಿ ಮಾರ್ಚೀ 28ನೇ ಮಂಗಳವಾರ ಬೆಳಿಗ್ಯೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮರ್ ಮಾಡಲ್ಪಟ್ಟಿರುವದಲ್ಲದೆ ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೆ ಹೋದರೆ ನಿಮ್ಮ ಗೈರ್ ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ಇಷ್ಯೂ ಮಾಡಲ್ಪಡುವದು.

ಸ್ಯ 1887ನೇ ಇಸವಿ ಮಾರ್ಚೀ ಮಾಹೆ 8ನೇ ಮಂಗಳವಾರದಲ್ಲಿ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಿ. ಸುಬ್ಬರಾವ್,
ಮುನಸಿಫ್.

## ಫಾರೆಸ್ಟ್ ಇಲಾಖೆ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ನಮೆಂಟ್ ಫಾರೆಸ್ಟುಗಳಿಂದಲೂ ಹಿಡುವಳೀ ಜಮೀನುಗಳಿಂದಲೂ, 1887—88ನೇ ಮುಂದಿನ ಸರ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುನ್ನಿಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚೆಕ್ಕಿ ತಯಾರ್ಮಾಡಿ ಅಂದರೆ ಮೇಲ್ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜವಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಯೆ ಇದರ ದೆಕೇಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

| | | ಟನ್‌ಗಳು. |
|---|---|---|
| 1. | ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇಖೀಲ್ | 40 |
| 2. | ಅರಕೇಕೆರೆ ತಾಲ್ಲೂಕು .. .. | 30 |
| 3. | ಚನ್ನರಾಯಪಟ್ಟಣದ ತಾಲ್ಲೂಕು .. .. | 10 |
| 4. | ಹೊಳೇನರಸೀಪುರ ಡಿಟೋ .. .. | 10 |
| 5. | ಅರಕಲ್‌ಗೂಡು ಡಿಟೋ .. .. | 40 |
| 6. | ಮಂಜರಾಬಾದ್ ಡಿಟೋ .. .. | 60 |
| 7. | ಬೇಲೂರು ಡಿಟೋ .. .. | 60 |
| | ಜುಮ್ಲಾ | 250 |

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಯೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟನ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರ್ಕೆಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರ್ತು ಅನ್ಯಥಾ ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತ್ ಮಾಡಲ್ಪಟ್ಟ ತೇದಾದಿಗೆ ದರ ಟನ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.

5. ಡೆಪ್ಯೂಟಿ ಕಮ್ಮಿಷನರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವೆ ಸ್ವಾತಂತ್ರ್ಯವನ್ನು ತಮ್ಮಲ್ಲಿಡೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಯೆ ಅವರು ಯಾವ ಕಾರಣವೂ ತಿಳಿಸಬೇಕಾದ್ದಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದುವಾರದವಳಗಾಗಿ ತಕ್ಕ ಥಾವಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.